**ಸಾಕ್ಷಿಯನ್ನು ದಿನಾಂಕ 20.07.2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ ಹೆಚ್ ಆರ್ ವಕೀಲರಿಂದಃ**

1) ಪಟ್ಟಾಬುಕ್ ಅನ್ನು ನಿಪಿ 61 ಎಂದು ಗುರುತಿಸಲಾಯಿತು.

2) ಸರ್ವೆ ಟಿಪ್ಪಣಿ ಸ್ಕೆಚ್ ಅನ್ನು ನಿಪಿ62 ಎಂದು ಗುರುತಿಸಲಾಯಿತು.

3) 63 ಬಿ ಸರ್ಟಿಫಿಕೇಟನ್ನು ನಿಪಿ62 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಟಿ ಎನ್ ಎಸ್ ವಕೀಲರಿಂದಃ**

ಬಸಪ್ಪರಾಧ್ಯ ರವರಿಗೆ ಮುನ್ಸಿಪಾಟಿರವರಿಗೆ ರೆಸಲ್ಯೂಷನ್ ಮುಖಾಂತರ ಜಮೀನು ವಾಪಸ್ಸು ಮಾಡಿ ಎಂದು ಆದೇಶ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂಜಮ್ಮನ ಗಂಡನ ಹೆಸರು ಬಸಪ್ಪರಾಧ್ಯ ಎಂದರೆ ಸರಿ. ನಿಪಿ61 ರ ದಾಖಲಾತಿಯಲ್ಲಿ ಬಸವೇಶ್ವರ ದೇವರ ಇನಾಮತಿ ಜಮೀನು ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ62 ರ ದಾಖಲಾತಿಯಲ್ಲಿ ಸರ್ವೆ ನಂ. 1/1 ಮತ್ತು ಸರ್ವೆ ನಂ. 1/2 ಜಮೀನಿಗೆ ಸಂಬಂಧಪಟ್ಟ ದಾಖಲಾತಿಯಾಗಿದೆ ಎಂದರೆ ಸರಿ. ನಾನು ಕೊಟ್ಟಿರುವ ದಾಖಲಾತಿಗಳ ಪ್ರಕಾರ ಸರ್ವೆ ನಂ. 1/1 ರ ಜಮೀನು ಸರ್ವೆ ನಂ. 1/2 ರ ಪಶ್ಚಿಮಕ್ಕೆ ಬರುತ್ತದೆ ಎಂದರೆ ಸರಿ. ನಿಪಿ51 ರ ಪ್ರಕಾರ ಸರ್ವೆ ನಂ. 1/1 ಜಮೀನು ಬಸವೇಶ್ವರ ದೇವರ ಇನಾಮತಿ ಜಮೀನು ಎಂದರೆ ಸರಿ. ನಾನು ಕೊಟ್ಟಿರುವ ನಿಪಿ51 ರಂತೆ 1/2 ಜಮೀನು ಮುನಿಶಾಮಿ ಬಿನ್ ನಂಜಪ್ಪ ರವರ ಹೆಸರಿನಲ್ಲಿದೆ ಎಂದರೆ ಸರಿ. ರಿಕ್ಲಾಸಿಪಿಕೇಶನ್ ಆದ ನಂತರ ಬದಲಾಗಿದೆ.

LAQ2/1975-76 ರಂತೆ ಆದೇಶವಾಗಿರುವುದು ಬಸಪ್ಪರಾಧ್ಯ ರವರಿಗೆ ಆಗಿದೆ ಎಂದರೆ ಸರಿ. ಆದರೆ ಆರ್ ಟಿ ಸಿ ಬಸವರಾಧ್ಯ ರವರಿಗೆ ಇದೆ. ಬಸವರಾಧ್ಯ ರವರ ಹೆಸರಿಗೆ ನಾವೇ ಆರ್ ಟಿ ಸಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಕೊಟ್ಟಿರುವ ದಾಖಲಾತಿಗಳು 1/2 ಜಮೀನುಗಳು ಎಂದರೆ ಸಾಕ್ಷಿಯು ಕ್ರಯ ಪತ್ರದಲ್ಲಿ ತಪ್ಪಾಗಿದೆ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ವಾದಿಯು ಉಚ್ಚ ನ್ಯಾಯಾಲಯದಲ್ಲಿ WP No. 46995/2017 ರಂತೆ ಮೇಲ್ಮನಳಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ರಿಟ್ ಪಿಟಿಷನ್ ವಜಾ ಆಗಿದೆ ಎಂದರೆ ಸಾಕ್ಷಿಯು ಮೆರಿಟ್ ಮೇಲೆ ವಜಾ ಆಗಿದೆ ಎಂದು ನುಡಿಯುತ್ತಾರೆ. ವಾದಿಯು ಒ ಎಸ್ 183/2018 ರಂತೆ ಶಾಶ್ವತ ನಿರ್ಬಂದಕಾಜ್ಞೆ ಕೋರಿ ದಾವೆಯನ್ನು principal court ನಲ್ಲಿ ಸಲ್ಲಿಸಿದ್ದಾರೆ ಎಂದರೆ ಸರಿ. ವಾದಿಯು ಇದೇ ನ್ಯಾಯಾಲಯದಲ್ಲಿ ಪ್ರತಿವಾದಿಗಳಿಗೆ ಆಗಿರುವ ಕ್ರಯ ಪತ್ರ ರದ್ದು ಮಾಡಬೇಕೆಂದು ಕೇಸು ಹಾಕಿದ್ದಾರೆ ಎಂದರೆ ಸರಿ. 1975 ಇದುವರೆಗೂ ಆಗಿರುವವೆಗೂ ಕೇಸುಗಳ ದಾಖಲಾತಿಗಳನ್ನು ನೋಡಿಲ್ಲ.

ಒ ಎಸ್ 74/2015 ರಲ್ಲಿ ಜಿಪಿಎ ಹೋಲ್ಡರ್ ಬೇರೆಯವರು ಬಂದಿದ್ದಾರೆ ಎಂದರೆ ಸರಿ. ವಾದಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಹೋರಬರುತ್ತದೆ ಎಂದು ವಾದಿಯನ್ನು ಬರಲು ಬಿಡುತ್ತಿಲ್ಲ ಎಂದರೆ ಸರಿಯಲ್ಲ. ಸಅದರಿ ಜಮೀನು ಭೂಪರಿವರ್ತನೆಯಾಗಿ ಸೈಟುಗಳಾಗಿ ಬದಲಾಗಿದೆ ಎಂದರೆ ಸಾಕ್ಷಿಯ ಈ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದಲ್ಲಿ ಸ್ಟೇ ಆರ್ಡರ್ ಇದ್ದರು ಮಾಡಿದ್ದಾರೆ

ಎಂದು ನುಡಿಯುತ್ತಾರೆ. ಒ ಎಸ್ 74/2015 ಹಾಗೂ WP 46995/2017 ರಲ್ಲಿ ಸಹ ಸ್ಟೇ ಇತ್ತು ಎಂದು ನುಡಿಯುತ್ತಾರೆ.ಒ ಎಸ್ 74/2015 ರಲ್ಲಿ ಯಾವುದೇ ಸ್ಟೇ ಇರಲಿಲ್ಲ ಹಾಗೂ WP 46995/2017 ವಜಾ ಆಗಿದೆ ಎಂದರೆ ಸರಿಯಲ್ಲ. 1975 ನೇ ಇಸವಿಯಿಂದ ಇದುವರೆಗೂ ನಡೆದಿರುವ ಕೇಸುಗಳಲ್ಲಿ ಬಸವರಾಧ್ಯ ರವರ ಬ್ರ್ಯಾಂಚ್ ಗೆ ದಾವಾ ಆಸ್ತಿಯಲ್ಲಿ ಹಕ್ಕಿದೆ ಎಂದು ಯಾವುದಾದರೂ ಕೇಸನಲ್ಲಿ ತೀರ್ಪು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ಕೇಸನ್ನು ಹಾಕಿ ನ್ಯಾಯಾಲಯದ ಸಮಯವನ್ನು ವ್ಯರ್ಥ ಮಾಡಿದ್ದೇವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲಃ</u>**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.